ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು 560012

ಸಂಖ್ಯೆ: 4004 ಪಿಯುಇ 1-ಸಿಬ್ಬಂದಿ/ಸಿಆರ್ 2/ಎನ್ ಓಸಿ-2018-19 ದಿನಾಂಕ: 11 -03 -2019

**ಜ್ಞಾಪನ**

ವಿಷಯ:- ಕೇಂದ್ರ/ರಾಜ್ಯ ಸರ್ಕಾರ, ವಿಶ್ವವಿದ್ಯಾಲಯ ಹಾಗೂ ಇತರೆ ಹುದ್ದೆಗಳಿಗೆ ಮತ್ತು ಕೆ.ಸೆಟ್ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:- ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಧಾರವಾಡ/ಚಿಕ್ಕಬಳ್ಳಾಪುರ ರವರು ಸಲ್ಲಿಸಿರುವ ಪ್ರಸ್ತಾವನೆಗಳು

****

ಪದವಿ ಪೂರ್ವ ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಪೂರ್ವ ಕಾಲೇಜು ಇಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಸಿಬ್ಬಂದಿಯವರು ರಾಜ್ಯ ಸರ್ಕಾರದ/ಕೇಂದ್ರ ಸರ್ಕಾರದ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅನುಮತಿ ಕೋರಿ ಉಪನಿರ್ದೇಶಕರ ಮುಖೇನ ಮನವಿ ಪತ್ರಗಳನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಈ ಕೆಳಕಂಡ ಬೋಧಕ ಸಿಬ್ಬಂದಿ ವರ್ಗದವರ ಹೆಸರಿನ ಮುಂದೆ ತೋರಿಸಿರುವ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಷರತ್ತಿಗೊಳಪಟ್ಟು ಅನುಮತಿ ನೀಡಿದೆ.

| ಕ್ರ ಸಂ | ಹೆಸರು ಮತ್ತು ಕಾಲೇಜು ವಿಳಾಸ ಶ್ರೀಮತಿ/ಶ್ರೀ/ಕುಮಾರಿ | ಅನುಮತಿ ಕೋರಲಾದ ಹುದ್ದೆ |
|---|---|---|
| 1.. | ಶ್ರೀ ದೊರೆರಾಜು. ಇಂಗ್ಲೀಷ್ ಉಪನ್ಯಾಸಕರು. ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು. ಚಿಂತಾಮಣಿ | ನವೋದಯ ವಿದ್ಯಾಲಯ ಸಮಿತಿ. ರವರು ಆಹ್ವಾನಿಸಿರುವ ಪ್ರಾಚಾರ್ಯರ ಹುದ್ದೆಗೆ ಅರ್ಜಿ ಸಲ್ಲಿಸಲು |
| 2 | ಶ್ರೀಮತಿ ಮಂಜುಳಾ ಎನ್ ಸವಡಿ. ಅರ್ಥಶಾಸ್ತ್ರ ಉಪನ್ಯಾಸಕರು. ಸರ್ಕಾರಿ ಪದವಿ ಪೂರ್ವ ಕಾಲೇಜು. ಧಾರವಾಡ | ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ. ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಸಲ್ಲಿಸಲು |

ಷರತ್ತುಗಳು:

1. ಸದರಿ ಸಿಬ್ಬಂದಿಗಳು. ಪರೀಕ್ಷೆಗೆ ಸಂಬಂಧಿಸಿದಂತೆ ಅಧ್ಯಯನವನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕೈಗೊಳ್ಳತಕ್ಕದ್ದು. ಸಿಬ್ಬಂದಿಗಳು. ಸದರಿ ಪರೀಕ್ಷೆಯ ಅಧ್ಯಯನದ ನಿಮಿತ್ತ ಸರ್ಕಾರ/ಇಲಾಖೆಗೆ ಯಾವುದೇ ಆರ್ಥಿಕ ಹೊರೆ ಉಂಟಾಗತಕ್ಕದ್ದಲ್ಲ.
2. ಸದರಿ ಸಿಬ್ಬಂದಿಗಳು/ಉಪನ್ಯಾಸಕರುಗಳು. ವಿದ್ಯಾರ್ಥಿಗಳ ಪಾಠ-ಪ್ರವಚನಗಳಿಗೆ ತೊಂದರೆ ಉಂಟಾಗದಂತೆ ಬಿಡುವಿನ ವೇಳೆಯಲ್ಲಿ. ಪರೀಕ್ಷೆಯ ಅಧ್ಯಯನಕ್ಕೆ ಬೇಕಾದ ಸಿದ್ಧತೆ ಮಾಡಿಕೊಳ್ಳತಕ್ಕದ್ದು.
3. ಸದರಿ ಸಿಬ್ಬಂದಿ/ಉಪನ್ಯಾಸಕರುಗಳು ಸದರಿ ಪರೀಕ್ಷೆಯ ಅಧ್ಯಯನದ ನಿಮಿತ್ತ ವರ್ಗಾವಣೆ ಕೋರುವಂತಿಲ್ಲ ಅಥವಾ ಅವರ ಪರೀಕ್ಷೆಯ ಅಧ್ಯಯನ ಸರ್ಕಾರದ/ಇಲಾಖೆಯ ವರ್ಗಾವಣೆಗೆ ಅಡ್ಡಿ ಬರುವಂತಿಲ್ಲ.
4. ಸದರಿ ಸಿಬ್ಬಂದಿಗಳು /ಉಪನ್ಯಾಸಕರುಗಳು ಬೇರೆ ಯಾವುದೇ ಇಲಾಖೆಯ ಹುದ್ದೆಗೆ ಆಯ್ಕೆಯಾದಲ್ಲಿ. ಈಗ ಕಾರ್ಯ ನಿರ್ವಹಿಸುತ್ತಿರುವ ಹುದ್ದೆಯಿಂದ ಬಿಡುಗಡೆ ಹೊಂದುವ ಮೊದಲು ಇಲಾಖೆಯ ಅನುಮತಿ ಪಡೆಯತಕ್ಕದ್ದು.

11/3/19

ಜಂಟಿ ನಿರ್ದೇಶಕರು(ಆಡಳಿತ)
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1.ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರಿಗೆ.
2.ಸಹಾಯಕ ನಿರ್ದೇಶಕರು, ಇ-ಆಡಳಿತ. ಪಪೂಶಿ ಇ. ಬೆಂಗಳೂರು.
3.ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರಿಗೆ
4.ಕಛೇರಿ ಪ್ರತಿ.